**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ**
**CC.No. 465/2023**
**CW : 04 PW: 05**
**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 21.02.2026**

| | |
|---|---|
| ಹೆಸರು | : ಸಂಜು ಚೌಹಾಣ |
| ತಂದೆಯ ಹೆಸರು | : ಖೋಬು |
| ವಯಸ್ಸು | : 35 |
| ಉದ್ಯೋಗ | : ಕೂಲಿ |
| ವಾಸಸ್ಥಳ | : ದೇವನತೆಗನೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ನನ್ನ ಸಹೋದರಿ, ಚಾಸಾ-2, , 5 ಮತ್ತು 6 ಇವರ ಪರಿಚಯ ಇರುತ್ತದೆ. **ಆರೋಪಿತರ ಪರಿಚಯ ನನಗೆ ಇರುತ್ತದೆ.** ದಿ: 30/07/2023 ರಂದು ಬೆಳಿಗ್ಗೆ 8.45 ರ ಸುಮಾರಿಗೆ ಎಲ್ಲಾ ಆರೋಪಿತರು ಮನೆ ಕಡೆ ಬಂದು ಆರೋಪಿ ನಂ.3 ರವರ ಬಂದು ಚಾಸಾ-1 ಇವರ ಕೈಯನ್ನು ಹಿಡಿದು ತಿರುವಿ ಹೊಡೆದಿದ್ದು ಇರುತ್ತದೆ. ಹೊರಗೆ ಬಾ ಇಲ್ಲವಾದಲ್ಲಿ ನಾವೇ ಕೈಯನ್ನು ಹಿಡಿದು ಎಳೆದುಕೊಂಡು ಬರುತ್ತೇವೆ ಎಂದು ಹೇಳಿದ್ದು ಇರುತ್ತದೆ. ನಂತರದಲ್ಲಿ ಸದರಿ ಆರೋಪಿ ನಂ.2 ಚಾಸಾ-1 ಇವರಿಗೆ ಕಪಾಳಮೋಕ್ಷ ಮಾಡಿರುತ್ತಾರೆ.

ಅಷ್ಟರಲ್ಲಿಯೇ ಸ್ಥಳಕ್ಕೆ ಪೋಲೀಸರು ಬಂದಿರುತ್ತಾರೆ. ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಆರೋಪಿ ನಂ.1 ಖಲ್ಲಾಸ ಮಾಡಿಬಿಡುವುದಾಗಿ ಚಾಸಾ-1 ಇವರಿಗೆ ಪ್ರಾಣ ಬೆದರಿಕೆಯನ್ನು ಹೂಡಿದ್ದು ಇರುತ್ತದೆ. ಆರೋಪಿ ನಂ.5 ಮತ್ತು 6 ಇವರು ಸಹ ಚಾಸಾ-1 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಮ್ಮ ಊರಿನವರು ಸದರಿ ಜಗಳವನ್ನು ಬಂದು ಬಿಡಿಸಿರುತ್ತಾರೆ. ಅವರು ನಾನು, ಚಾಸಾ-5 ಮತ್ತು 6 ಆಗಿರುತ್ತೇವೆ. ಚಾಸಾ-1 ರವರು ದೂರು ನೀಡಿರುತ್ತಾರೆ. ನಾನು ಜಗಳವನ್ನು ಬಿಡಿಸಿರುತ್ತೇನೆ. ನನ್ನ ಕಣ್ಣೆದುರೇ ಆರೋಪಿತರು ಹೊಡಿಬಡಿ ಮಾಡಿರುತ್ತಾರೆ. ನಾವು ಕೇವಲ ಜಗಳವನ್ನು ಮಾತ್ರ ಬಿಡಿಸಿರುತ್ತೇವೆ. ಇಷ್ಟನ್ನು ಹೊರತುಪಡಿಸಿ ಬೇರೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಪ್ರಕರಣದ ಆರೋಪಿತರು ಅಕ್ರಮ ಕೂಟ ರಚಿಸಿಕೊಂಡು ಮನೆಯ ಬಳಿ ಬಂದಿದ್ದರು ಎಂದರೆ ಸರಿ. ಆರೋಪಿ ನಂ.3 ಇವರು ಅವಾಚ್ಯ ಶಬ್ದಗಳಿಂದ ಬೈದು ಮನೆಯ ಹೊರಗಡೆ ಬಾ ಎಂದು ಕರೆದಿದ್ದು ಇರುತ್ತದೆ. ಎಂದರೆ ಸರಿ. ಆರೋಪಿ ನಂ.1 ಬಿ.ಸಿ ಹಣವನ್ನು ನೀಡದಿದ್ದರೆ ನಿನ್ನ ಪ್ರಾಣವನ್ನು ತೆಗೆಯುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಆರೋಪೀ ನಂ.1 ಮತ್ತು 4 ಇವರು ಚಾಸಾ-1 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ ಮಾನಕ್ಕೆ ಧಕ್ಕೆ ಆಗುವ ರೀತಿಯಲ್ಲಿ ನಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಆರೋಪೀ ನಂ.5 ಮತ್ತು 6 ಇವರೂ ಚಾಸಾ-1 ಇವರಿಗೆ ಊರು ಬಿಟ್ಟು ಹೋದವಳು ಮತ್ತೇಕೆ ಬಂದೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆರೋಪಿ ನಂ.1 ಜಗಳವನ್ನು ಬಿಟ್ಟು ಹೋಗುವ ಸಮಯದಲ್ಲಿ ಚಾಸಾ-1 ಇವರಿಗೆ ಪ್ರಾಣ ಬೆದರಿಕೆ ಹೊಡಿದ್ದು ಇರುತ್ತದೆ ಎಂದರೆ ಸರಿ. ಸದರಿ ಎಲ್ಲ ಜಗಳವು ಬಿ.ಸಿ. ಹಣಕ್ಕೋಸ್ಕರ ಆಗಿದ್ದು ಇರುತ್ತದೆ ಎಂದರೆ ಸರಿ. ಈ ಪೂರ್ವದಲ್ಲಿ ಆರೋಪಿ ನಂ.1 ಬಿ.ಸಿ. ಹಣ ಸಮಾನ ಹಂಚಿಕೆ ಮಾಡುವ ಕುರಿತು ಪದೇ ಪದೇ ತಂಟೆ ತಕರಾರು ತೆಗೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿದಾರರು ಈಗ ಜಗಳವನ್ನು ಆಡಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ನಾನು ಅಶಿಕ್ಷಿತನಿರುತ್ತೇನೆ, ಶಾಲೆ ಓದಿರುವುದಿಲ್ಲ, ನಾನು ನೀಡಿರುವ ಹೇಳಿಕೆ ಕುರಿತು ಯಾವುದೇ ವೈಯುಕ್ತಿಕ ಮಾಹಿತಿ ಇರುವುದಿಲ್ಲ. ಪೋಲೀಸರು ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಈ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಈಗ ನಾನು ನುಡಿಯುತ್ತಿದ್ದೇನೆ ಎಂದರೆ ಸರಿ. ಚಾಸಾ-1 ಇವಳನ್ನು ಸಹಾಯ ಮಾಡುವ ಉದ್ದೇಶಕ್ಕಾಗಿ ನಾನು ಸ್ಥಳದಲ್ಲಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮೇಲೆ ಸುಮಾರು ಪ್ರಕರಣಗಳು ನ್ಯಾಯಾಲಯದಲ್ಲಿ ಇರುತ್ತವೆ ಎಂದರೆ ಸರಿ. ಸಿ.ಪಿ.ಐ ಗೆ ಹೊಡೆದಿರುವ ಕಾರಣ ನನ್ನ ಮತ್ತು ಸಹೋದರಿಯ ಮೇಲೆ ಪ್ರಕರಣ

**CC.No. 465/2023**
**CW : 04  PW: 05**

ದಾಖಲಾಗಿರುತ್ತದೆ ಎಂದರೆ ಸಾಕ್ಷಿದಾರರು ಎಲ್ಲಾ ಸುಳ್ಳು ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಆರೋಪಿತರ ಬಿ.ಸಿ. ಹಣವನ್ನು ಮುಳುಗಿಸುವ ಉದ್ದೇಶದಿಂದ ಆಕೆಯನ್ನು ಬೆಂಬಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**